# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಜಾರಿ ನಂ.12-2021** **ಪಿ . ಡಬ್ಲುಃ 3**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಕೆ.ಆರಸೇಗೌಡ<br>ಮಾದೇಶ್ವರ ನಗರ, ಹಾರೋಹಳ್ಳಿ, ಬೆಂಗಳೂರು |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 10-01-2024. |

**<u>ಪಾಟೀ ಸವಾಲು ತೀರ್ಪುಋಣಿದಾರರ ಪರ ಶ್ರೀ ಕೆ.ಎಸ್.ಎಂ ವಕೀಲರಿಂದಃ-</u>**

ನಾನು ಎಸ್.ಎಸ್.ಎಲ್.ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದು ನನಗೆ ಓದಲು ಬರೆಯಲು ಬರುತ್ತದೆ. ನನ್ನ ಮತ್ತು ಡಿಕ್ರಿದಾರರ ನಡುವೆ ಆದ ನಿಪಿ-7 ಕ್ರಯದ ಕರಾರಿನಲ್ಲಿ ಈ ಜಾರಿ ಅರ್ಜಿಯ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ನಿಪಿ-8 ನನ್ನ ಮತ್ತು ಡಿಕ್ರಿದಾರರ ನಡುವೆ ಆದ ಕ್ರಯ ರದ್ಧಾಯಿತ ಪತ್ರವಾಗಿರುತ್ತದೆ ಎಂದರೆ ಸರಿ. ನಿಪಿ-8 ರಲ್ಲಿ ಕ್ರಯದ ಕರಾರು ಒಪ್ಪಂದ ಪತ್ರದಲ್ಲಿ ಕಂಡಂತೆ ಅವಧಿಯೊಳಗೆ ನೋಂದಣಿ ಮಾಡಿಸಿಕೊಳ್ಳಲು ಬ್ಯಾಂಕಿನಿಂದ ಸಕಾಲದಲ್ಲಿ ಸಾಲ ದೂರೆತಿರುವುದಿಲ್ಲ, ನನಗೆ ನಾನು ಪಾವತಿ ಮಾಡಿರುವ ಮುಂಗಡ ಹಣದ ಅವಶ್ಯಕತೆ ಇರುವುದರಿಂದ ಈ ಹಿಂದೆ ಕ್ರಯದ ಕರಾರು ಒಪ್ಪಂದದ ಸಂದರ್ಭದಲ್ಲಿ ಪಾವತಿ ಮಾಡಿರುವ ಮುಂಗಡ ಹಣ ರೂ.15,00,000/- ಗಳನ್ನು ಈ ಕೆಳಗೆ ರುಜು ಮಾಡಿರುವ ಸಾಕ್ಷಿಗಳ ರೂಬು ರೂಬು ಪಡೆದುಕೊಂಡಿರುತ್ತೇನೆ ಎಂದು ನಮೂದು ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಮತ್ತು ಡಿಕ್ರಿದಾರರ ನಡುವೆ ಕ್ರಯ ದ ಕರಾರು ಆದ ಸಮಯ ಅರ್ಜಿ ಷೆಡ್ಯೂಲ್ ಸ್ವತ್ತಿನ ಬಳಿ ಯಾವುದಲೇ ನಾಮಫಲಕ ಇರಲಿಲ್ಲ, ಆದರೆ 7-8 ತಿಂಗಳು ಕಳೆದ ನಂತರ ನಾನು ಮತ್ತು ನನ್ನ ತಾತನವರು ಅರ್ಜಿ ಷೆಡ್ಯೂಲ್ ಸ್ವತ್ತಿನ ಬಳಿ ಬಂದಾಗ ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿರುವ ಬಗ್ಗೆ ನಾಮಫಲಕ ಇದ್ದುದ್ದರಿಂದ ನನ್ನ ತಾತನವರು ಸಲಹೆ ಮೇರೆಗೆ ನಾನು ಅರ್ಜಿ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಪಡೆಯಲು ಮುಂದುವರೆದಿರುವುದಿಲ್ಲ ಆದರೆ ಸದರಿ ವಿಚಾರವನ್ನು ನಾನು ಡಿಕ್ರಿದಾರರಿಗೆ ತಿಳಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಈಗ ಮೇಲೆ ಹೇಳಿದ ವಿಚಾರವನ್ನು ನಿಪಿ-8 ಕ್ರಯದ ಕರಾರು ಒಪ್ಪಂದದ ರದ್ಧಾಯಿತಿ ಪತ್ರದಲ್ಲಿ ನಮೂದು ಮಾಡಿರುವುದಿಲ್ಲ. ನಾನು ಡಿಕ್ರಿದಾರರಿಗೆ ರೂ.15,00,000/- ಗಳನ್ನು ನಗದಾಗಿ ನೀಡಿರುತ್ತೇನೆ. ನಾನು ನಿವೇಶನ ಮಾರಿ ಬಂದ ಹಣವನ್ನು ಡಿಕ್ರಿದಾರರಿಗೆ ಮುಂಗಡವಾಗಿ ನೀಡಿದ್ದು, ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಸಿದ್ಧನಿರುತ್ತೇನೆ.

2. ನೀವು ಬೆಂಗಳೂರಿನವರಾಗಿದ್ದು ನಂಜಗೂಡಿನಲ್ಲಿ ಜಮೀನು ಮಾರಾಟಕ್ಕೆ ಇರುವ ವಿಚಾರ ಹೇಗೆ ತಿಳಿಯಿತು ಎಂಬ ಪ್ರಶ್ನೆಗೆ ಸಾಕ್ಷಿ ಶಿವಪುರದ ಶ್ರೀನಿವಾಸ್ ರವರ ಮುಖೇನ ಹಾಗೂ ನನ್ನ ಸಹೋದರನಾದ ಮೋಹನ್ ಉ ಕೆಂಗಲ್ಲೇಗೌಡರ ಮುಖೇನ ಡಿಕ್ರಿದಾರರು ಪರಿಚಯ ವಾಗಿರುತ್ತಾರೆ ಎಂದು ನುಡಿಯುತ್ತಾರೆ. ನನಗೆ ಡಿಕ್ರಿದಾರರು  ಶಿವಪುರದ ಶ್ರೀನಿವಾಸ್ ರವರ ಮುಖೇನ ಹಾಗೂ ನನ್ನ ಸಹೋದರನಾದ ಮೋಹನ್ ಉ ಕೆಂಗಲ್ಲೇಗೌಡರ ಮುಖೇನ ಪರಿಚಯವಾಗಿದ್ದರಿಂದ ಅರ್ಜಿ ಅರ್ಜಿ ಷೆಡ್ಯೂಲ್ ಸ್ವತ್ತು ಮಾರಾಟಕ್ಕೆ ಇದೆ ಎಂಬ ವಿಚಾರ ನನಗೆ ತಿಳಿಯಿತು ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ. ನಾನು ಅರ್ಜಿ ಷೆಡ್ಯೂಲ್ ಸ್ವತ್ತು 2 ಕೋಟಿ 45 ಲಕ್ಷ ರೂಪಾಯಿಗಳಿಗೆ ಕೊಂಡುಕೊಳ್ಳಲು ಒಪ್ಪಂದ ಮಾಡಿಕೊಳ್ಳುವ ಸಮಯ ಕ್ರಯ ಪತ್ರದ ನೋಂದಣಿಗೆ ಬೇಕಾದ ಎಲ್ಲಾ ದಾಖಲಾತಿಗಳು ಸಿದ್ಧವಿದ್ದವು. ದಾಖಲಾತಿಗಳು ಸಿದ್ಧವಿದ್ದ ಪಕ್ಷದಲ್ಲಿ ಕ್ರಯದ ಕರಾರು ಮಾಡಿಕೊಳ್ಳುವ ಬದಲು ಕ್ರಯ ಪತ್ರವನ್ನು ನೋಂದಣಿ ಮಾಡಿಸಿಕೊಳ್ಳ ಬಹುದಾಗಿತ್ತಲ್ಲವೇ ಎಂಬ ಪ್ರಶ್ನೆಗೆ ಸಾಕ್ಷಿ ಕ್ರಯದ ಪೂರ್ಣ ಮೊಬಲಗು ನನ್ನ ಬಳಿ ಇಲ್ಲದೇ ಇದ್ದುದ್ದರಿಂದ ನೋಂದಣಿ ಕ್ರಯ ಪತ್ರವನ್ನು ಮಾಡಿಸಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ . ಸದರಿ ವಿಚಾರವನ್ನೇ ನೀವು ಕ್ರಯದ ಕರಾರು ರದ್ಧತಿ  ಪತ್ರದಲ್ಲಿ ಬರೆಸಿದ್ದೀರಲ್ಲವೇ ಎಂಬ ಪ್ರಶ್ನೆಗೆ ಸಾಕ್ಷಿ ಅರ್ಜಿ ಷೆಡ್ಯೂಲ್ ಸ್ವತ್ತಿನ ಮೇಲೆ ವ್ಯಾಜ್ಯವಿದ್ದ ಕಾರಣ ನಾನು ಅರ್ಜಿ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಪಡೆದುಕೊಂಡಿರುವುದಿಲ್ಲ, ಅದರೆ ಸದರಿ ವಿಚಾರವನ್ನು ನಿಪಿ–8 ರಲ್ಲಿ ನಮೂದಿಸಲು ಸಾಧ್ಯವಿಲ್ಲದ ಕಾರಣ ಸಕಾಲದಲ್ಲಿ ಹಣ ದೊರೆತಿರುವುದಿಲ್ಲ ಎಂದು ನಮೂದಿಸಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಬಳಿ ಅರ್ಜಿ ಷೆಡ್ಯೂಲ್ ಸ್ವತ್ತನ್ನು ಕೊಂಡುಕೊಳ್ಳಲು 2 ಕೋಟಿ 45 ಲಕ್ಷ ರೂಪಾಯಿಗಳು ಇತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಲು ಸಿದ್ಧನಿರುತ್ತೇನೆ. ಡಿಕ್ರಿದಾರರು ನನಗೆ ಪರಿಚಯಸ್ಥರಾಗಿರುವುದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ನಿಪಿ–7 ಮತ್ತು 8 ಅನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**2 ನೇ ಪ್ರ.ದ. ನ್ಯಾ ದಂ. ನಂಜನಗೂಡು**